# ರೂಪಾಯಿ ಒಂದು, ಭಾವನೆ ನೂರು

ಹಲೋ... ಎನ್ನುವ ಶಬ್ದ ಕೇಳಲು, ಹೇಳಲು ಅರ್ಧ ಕಿಲೋಮೀಟರ್ ದೂರ ಹೋಗಬೇಕಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ನಮ್ಮ ಆತ್ಮೀಯ ಸ್ನೇಹಿತನಾಗಿ, ಎಲ್ಲೋ ದೂರದಲ್ಲಿದ್ದವರನ್ನು ಸಂಪರ್ಕಿಸುವ ಸೇತುವೆಯಾಗಿ ಗುರುತಿಸಿಕೊಂಡಿದ್ದ ಈ ಕಾಯಿನ್ ಬಾಕ್ಸ್ ಫೋನ್, ಇಂದು ಜನಮಾನಸದಿಂದ ಬಹುದೂರ ಹೋಗಿದೆ.

ನೆಂಟರು, ಗೆಳೆಯರು, ಪ್ರೇಯಸಿಗೋ ಅಥವಾ ಇನ್ಯಾರಿಗೋ ಕರೆ ಮಾಡಲು ನಾವು ಆಶ್ರಯಿಸಿದ್ದು ಒಂದು ರೂಪಾಯಿ ನಾಣ್ಯದಿಂದ ಕಾರ್ಯ ನಿರ್ವಹಿಸುತ್ತಿದ್ದ ಇದೇ ಕಾಯಿನ್ ಬಾಕ್ಸ್ ಅನ್ನು. ಒಂದು ನಿಮಿಷ ಮಾತನಾಡಿದ ನಂತರ ಮಾತು ಇನ್ನೂ ಮುಂದುವರೆಸಬೇಕಿದ್ದಲ್ಲಿ ಮತ್ತೊಂದು ರೂಪಾಯಿ ನಾಣ್ಯ ಹಾಕಬೇಕಿತ್ತು. ಒಂದು ರೂಪಾಯಿ ನಾಣ್ಯದಿಂದ ಚಾಲ್ತಿಯಲ್ಲಿದ್ದ ಈ ಕಾಯಿನ್ ಬಾಕ್ಸ್ ಅದೆಷ್ಟೋ ಭಾವನೆಗಳ ವಿನಿಮಯ ಕೇಂದ್ರವಾಗಿತ್ತು.

ಮಾತು ಆರಂಭಿಸಿದ 50 ಸೆಕೆಂಡ್ ನಂತರ ಬೀಪ್ ಸೌಂಡ್ ಕೇಳುತ್ತಿತ್ತು. ಒಂದು ನಿಮಿಷ ಮುಕ್ತಾಯವಾಗುತ್ತಿರುವ ಸಿಗ್ನಲ್ ಆಗಿತ್ತು. 'ಹೇ ಇನ್ನೊಂದು ಕಾಯಿನ್ ಹಾಕು, ಇಲ್ಲಂದ್ರೆ ಕಾಲ್ ಕಟ್ಟಾಗುತ್ತೆ' ಎನ್ನುವ ಮಾತು ಮತ್ತೊಂದು ಕಡೆಯಿಂದ ಕೇಳುತ್ತಿತ್ತು. ನಾಣ್ಯ ಹಾಕಿದೊಡನೆ ಮತ್ತೆ ಮತ್ತೆ ಭಾವನೆಗಳ ಹೊಯ್ದಾಟ ಶುರು. ಆದರೆ ಈಗ ಜಗತ್ತನ್ನು ಕೈಗೆ ತಂದಿಟ್ಟಿರುವ ಸ್ಮಾರ್ಟ್‌ಫೋನ್‌ಗಳು ಅವುಗಳನ್ನು ಮೂಲೆಗೆ ಸರಿಸಿವೆ.

—ಹನುಮಂತ ಎಸ್.ಕೆ., ರಾಯಚೂರು






# ಮೂಗು ಮುರಿಯದಿರಿ ಎಲೆಮುರಿ ಕಂಡು

ರಸ್ತೆ ಬದಿ, ಖಾಲಿ ಜಾಗಗಳಲ್ಲಿ ಹಳದಿ ಹೂಗಳನ್ನು ಬಿಟ್ಟು ಸೆಟೆದು ನಿಂತಿರುವ ಈ ಗಿಡವನ್ನು ಎಲಸುರಿ, ಎಲಮುರಿಗೆ, ಎಲೆಮುರಿ, ಕಾಸರ್ದ, ಎಲವರಿಗೆ ಎಂದು ನಾಡಿನಾದ್ಯಂತ ಕರೆಯಲಾಗುತ್ತದೆ. ಗಿಡಮೂಲಿಕೆಯಾಗಿಯೂ ಗುರುತಿಸಿಕೊಂಡಿರುವ ಈ ಗಿಡಕ್ಕೆ ನೀಗ್ರೋ ಕಾಫಿ ಅಥವಾ ಕಾಫಿ ಸೆನ್ನಾ ಎಂಬ ಹೆಸರೂ ಇದೆ. ಸ್ವಲ್ಪ ಒಗರಿನಿಂದ ಕೂಡಿದ ದಟ್ಟ ವಾಸನೆ ಬೀರುವ ಸಸ್ಯವಾಗಿದೆ. ಹೆಚ್ಚು ಎತ್ತರಕ್ಕೆ ಬೆಳೆಯದ ಪೊದೆಯ ಜಾತಿಗೆ ಸೇರುವ ಎಲೆಮುರಿ, ಮಳೆ ಬಿದ್ದ ನಂತರ ಉದ್ಯಾನ, ರಸ್ತೆಯ ಬದಿ, ಖಾಲಿ ಜಾಗದಲ್ಲಿ ನೆಟ್ಟಗೆ ಚಿಗುರೊಡೆಯುತ್ತದೆ. ಕಳೆಯೆಂದು ಗ್ರಹಿಸಿದ್ದುದೂ ಇದೆ.

ಹಸಿರ ಎಲೆಗಳ ಮಧ್ಯೆ ಹಳದಿ ಹೂ ಬಿಟ್ಟು ನಂತರ ಉದ್ದನೆಯ ಕೋಡನ್ನು ಬಿಡುತ್ತವೆ. ತೆಳುವಾದ ಕಾಂಡಗಳು ಮತ್ತು ಕರಿಬೇವಿನಂತೆ ಚೂಪಾದ ಎಲೆಗಳೊಂದಿಗೆ ಹೆಚ್ಚೆಂದರೆ ಎರಡು ಮೀಟರ್ ಎತ್ತರದವರೆಗೆ ಬೆಳೆಯುತ್ತವೆ. ಎಲೆಗಳು ತೆಳುವಾಗಿರುತ್ತವೆ. ಕೋಡಿನೊಳಗಿರುವ ಕಡು ಕಂದು ಬಣ್ಣದ ಬೀಜಗಳ ಪೌಡರ್ ಪಾನೀಯವಾಗಿ ಬಳಸಲಾಗುತ್ತದೆ. ಎಲೆಮುರಿ ಸೊಪ್ಪು ಉರಿಯೂತ ನಿವಾರಕ, ನಂಜುನಿರೋಧಕ, ಜೀರ್ಣಕ್ರಿಯೆಗೆ ನೆರವಾಗುತ್ತದೆ. ಇದರ ಎಳೆ ಎಲೆಯನ್ನು ಹುರಿದು ಮಾಡಿದ ಚಟ್ನಿ ಅನ್ನದೊಂದಿಗೆ ಬಲುರುಚಿ.

—ವಿಶ್ವನಾಥ ಭಟ್, ಧಾರವಾಡ

# ಅಟ್ಟೆಕುಣಬಿಗರ ಪ್ರಕೃತಿ ಬದುಕು

ಪಕೃತಿಯ ಸವಾಲುಗಳ ಮಧ್ಯೆ ಬದುಕುವ ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಮಲವಳ್ಳಿಯ ಅಟ್ಟೆಕುಣಬಿ ಜನಾಂಗದವರು ಕಾಡಿನ ಉತ್ಪನ್ನಗಳನ್ನೇ ಬಳಸಿ ಬದುಕುವಲ್ಲಿ ನಿಸ್ಸೀಮರು. ಬೆತ್ತ, ವಾಟೆ, ಮುರುಗಲು, ರಾಮಪತ್ರೆ, ಉಪ್ಪಾಗೆ, ಲೌಗ, ತೊಡುವೆ ಜೇನು ಹೀಗೆ ತಮ್ಮ ಬದುಕಿಗೆ ಅಗತ್ಯವಾದ ಉತ್ಪನ್ನಗಳನ್ನು ಸಂಗ್ರಹಿಸುತ್ತಾರೆ. ಮಣ್ಣಿನ ಗುಡಿಸಲಿನ ಪುಟ್ಟದಾದ ಜಾಗದಲ್ಲಿ ತಮ್ಮದೇ ಜಗತ್ತನ್ನು ನಿರ್ಮಿಸಿಕೊಂಡಿದ್ದಾರೆ. ಮನೆಯ ಗೋಡೆಯ ತುಂಬಾ ಸೇಡಿ, ಕೆಮ್ಮಣ್ಣಿನ ಹಸೆ ಚಿತ್ತಾರ ಬಿಡಿಸುತ್ತಾರೆ. ತಮ್ಮ ಕುಲಕಸುಬಿನ ಚಟುವಟಿಕೆಯಲ್ಲಿ ಕಾಡಿನ ಕೌಶಲ್ಯಗಳು ಅನಾವರಣಗೊಳಿಸುವುದು ಇವರ ಸ್ವಾವಲಂಬಿ ಜೀವನದ ಕನ್ನಡಿಯಾಗಿದೆ. ದನ ಕಾಯುವ ಹೆಂಗಸರು ಬಿಂದಿ ಪದಗಳನ್ನು ಹಾಡುತ್ತಾ ಸ್ಥಳೀಯ ಗುಡ್ಡದಲ್ಲಿ ಸಿಗುವ ಈಚಲು ಮರದ ಎಲೆಗಳನ್ನು ಬಳಸಿ ಕೈಯಲ್ಲಿ ಚಾಪೆಯನ್ನು ಆಕರ್ಷಕವಾಗಿ ಹೆಣೆಯುತ್ತಾರೆ. ನಾಗಬೆತ್ತ, ಕರಿಬೆತ್ತಗಳನ್ನು ತಂದು ವಿವಿಧ ಆಕಾರದ ಬುಟ್ಟಿ, ಪೆಟ್ಟಿಗೆ, ಧಾನ್ಯ ಸಂಗ್ರಹಿಸುವ ಮೊರ, ಧಾನ್ಯ ಸ್ವಚ್ಛಗೊಳಿಸುವ ಸಾರಣಿಗೆ ಮುಂತಾದ ನಿತ್ಯದ ಜೀವನ ಸಂಗ್ರಹಕ್ಕೆ ಬೇಕಾದ ಪರಿಕರಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಸಾಂಪ್ರದಾಯಿಕವಾಗಿ ಕೌಶಲ್ಯವನ್ನು ಬೆಳೆಸಿಕೊಂಡು ಪ್ಲಾಸ್ಟಿಕ್ ರಹಿತವಾಗಿ ಬದುಕುವ ಅವರ ಜೀವನ ಕ್ರಮ ಆಧುನಿಕತೆಗೆ ಸೆಡ್ಡುಹೊಡೆದ ಸಾಕ್ಷಿಯಾಗಿದೆ.



—ದತ್ತಾತ್ರೇಯ ಭಟ್ಟ, ಕಣ್ಣಿಪಾಲ
ಯಲ್ಲಾಪುರ